# 207

(I)

Total No. of Questions– **16**

Total No. of Printed Pages– **4**     **Regd. No.** | | | | | | | | | | |

**Part II**

**KANNADA**

**Paper II**

**(Second Language)**

***Time : 3 Hours***     ***Max. Marks : 100***

**I.** **(A)** ಈ ಕೆಳಗಿನ ಪದ್ಯಗಳೆರಡರಲ್ಲಿ ಒಂದರ ಭಾವಾರ್ಥ ಬರೆಯಿರಿ : 1×5=5

ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ।
ಒಣಗಲ್ಪೈರಿಗೆ ಬಾರದಿರ್ದ ಮಳೆತಾಂ ಬಂದೇನಾಪತ್ತಿನೊಳ್॥
ಮಣಿದುಂ ನೋಡದ ಬಂಧುವೇತಕಿಣಿಸಲ್ ಕಾಲೋಚಿತಕ್ಕೈದಿದಾ।
ತೃಣವೇ ಪರ್ವತವಲ್ಲವೇ ಹರಹರಾ ಶ್ರೀಚೆನ್ನ ಸೋಮೇಶ್ವರಾ॥

ಅಥವಾ

ಕಲಿತದ್ದು: ಕ್ಯೂನಿಲ್ಲು; ಫುಟ್‌ಪಾತಿನಲ್ಲೇ ಸಂಚರಿಸು;
ರಸ್ತೆ ದಾಟುವಾಗೆಚ್ಚರಿಕೆ; ಓಡು, ಎಲ್ಲಿಯೂ
ನಿಲ್ಲದಿರು; ಹೇಗೋ ಅವರಿವರ ತಳ್ಳಿ ಮುನ್ನುಗ್ಗು;
ಎಲ್ಲಾದರೂ ಸರಿಯೆ, ಬೇರೂರು, ಹೀರು.

**(B)** ಈ ಕೆಳಗಿನ ಇಬ್ಬರು ಕವಿ/ಲೇಖಕರಲ್ಲಿ ಒಬ್ಬರ ಪರಿಚಯ ಬರೆಯಿರಿ : 1×5=5

(1) ನಾಗಚಂದ್ರ.

(2) ಡಾ. ಎಚ್. ನಾಗವೇಣಿ.

**II.** ಈ ಕೆಳಗಿನ ಎರಡರಲ್ಲಿ ಒಂದಕ್ಕೆ **20** ವಾಕ್ಯಗಳು ಮೀರದಂತೆ ಉತ್ತರಿಸಿ : 1×5=5

(1) ಜನಪದರು ಹೇಳುವಂತೆ ತಾಯಿಯ ಮಹತ್ವವನ್ನು ಪದ್ಯದ ಉದಾಹರಣೆ ಮೂಲಕ ವಿವರಿಸಿ ಬರೆಯಿರಿ.

(2) ಮಗ, ಸೊಸೆ ಮತ್ತು ಮೊಮ್ಮಗಳು ಮುದುಕಿಯನ್ನು ಹೇಗೆ ನಡೆಸಿಕೊಳ್ಳುವರು?

**III.** ಈ ಕೆಳಗಿನ ಎರಡರಲ್ಲಿ ಒಂದಕ್ಕೆ **20** ವಾಕ್ಯಗಳು ಮೀರದಂತೆ ಉತ್ತರಿಸಿರಿ : 1×5=5

(1) ಹಳ್ಳಿಯ ಹೋಟೆಲಿನ ಚಿತ್ರಣಗಳನ್ನು ಕುರಿತು ಬರೆಯಿರಿ.

(2) ಕನ್ನಡಿಗರೆನಿಸಿಕೊಳ್ಳಲು ಯಾವ ಯೋಗ್ಯತೆಯ ಪ್ರಶ್ನೆಗಳು ನಮ್ಮನ್ನು ಚುಚ್ಚಬೇಕು? ವಿವರಿಸಿ.

IV. ಈ ಕೆಳಗಿನ ಎರಡರಲ್ಲಿ ಒಂದಕ್ಕೆ 20 ವಾಕ್ಯಗಳು ಮೀರದಂತೆ ಉತ್ತರಿಸಿ : 1×5=5

(1) ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?

(2) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೆ? ವಿವರಿಸಿ.

V. ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ ವಿವರಿಸಿ : 2×3=6

(1) ಬರಲುಂಟೆ ಸುಗ್ಗಿ ಮತ್ತೆ?

(2) ವೇಷ ಮರೆಸಿವೆ ಅಷ್ಟೆ-ಈ ಎಲ್ಲ ಕೇಡುಗಳು.

(3) ಬೆಳಕ ಬಟ್ಟೆಯ ತೊಡುವ ಯೋಗಿಯಂತೆ.

(4) ಧಗಧಗ ಉರಿವ ಜ್ವಾಲಾಮುಖಿಯಾಗಿದ್ದೇನೆ.

VI. ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂದರ್ಭ ಸಹಿತ ವಿವರಿಸಿ ಬರೆಯಿರಿ : 2×3=6

(1) 'ನೋಡು, ನಿನ್ನೆದುರು ಎರಡು ಆಯ್ಕೆಗಳಿವೆ.

(2) ಒಂದೊಂದು ಭಾಷೆಯೂ ಒಂದೊಂದು ವರ.

(3) ಎಲ್ಲ ಮಕ್ಕಳ ಕನಸೂ ಒಂದೇ.

(4) ಕಬ್ಬಮಂ ಕಂಡತ್ತಿ ಕಚ್ಚವೆಯ ನಿತ್ತರ್.

VII. ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ: 2×2=4

(1) ಸೀತೆಯ ತಲ್ಲಣಕ್ಕೆ ಕಾರಣವೇನು?

(2) ತಾನು ಘೋರತರ ವಿಷ ಕುಡಿವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ?

(3) ಯಾರಿಗೆ ತತ್ವಜ್ಞಾನ ಹೇಳಿ ಪ್ರಯೋಜನವಿಲ್ಲ?

(4) ಕವಿಯ ಪ್ರಕಾರ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು?

VIII. ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : 2×2=4

(1) ಡಾ. ಚಂದ್ರಪ್ಪ ಬಸಲಿಂಗನಿಗೆ ಡಾ. ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

(2) ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?

(3) ಕುಂಡದಲ್ಲಿ ನೆಟ್ಟ ಗಿಡಗಳ ಸ್ಥಿತಿ ಹೇಗಿರುತ್ತದೆ?

(4) ಮುಸುರೆ ಪಾತ್ರೆಗಳ 'ಒಡೆಯ' ಏನೆಂದು ಯೋಚಿಸಿದನು?

IX. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : 5×1=5

(1) ರಾವಣನು ಯಾವ ರೀತಿ ಚಲಿಸದೆ ಇದ್ದನು?

(2) ಯಾರು ಅನ್ಯಲಿಂಗವನ್ನು ನೆನೆಯುವುದಿಲ್ಲ?

(3) ಹಲವು ಹಳ್ಳಗಳು ಸೇರಿ ಏನಾಗುತ್ತವೆ?

(4) ಯಾವುದಕ್ಕೆ ಸೆಳವಿದೆಯೆಂದು ಕವಿ ಹೇಳುತ್ತಾರೆ?

(5) ಮೊಮ್ಮಗಳು ಏನು ಮಾಡುತ್ತಿದ್ದಳು?

X. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : 5×1=5

(1) ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವವರು ಯಾರು?

(2) ಹೊಳೆ ಯಾವುದಕ್ಕೆ ಹೊಂಚು ಹಾಕುತ್ತಿರುತ್ತದೆ?

(3) ದೇವರಿಗೆ ಹತ್ತಿರವಾದವರು ಯಾರು?

(4) ಕನ್ನಡವು ಕಸ್ತೂರಿಯಲ್ಲವೆ! ಎಂದವರಾರು?

(5) ಲೋಕಲ್ ಸುದ್ದಿಗಳಿಗೆ ಎಲ್ಲಿ ಪ್ರಾಶಸ್ತ್ಯವಿದೆ?

XI. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 5×1=5

(1) ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?

(2) ಪೋಸ್ಟ್‌ಮನ್ ಜಬ್ಬಾರನಿಗೆ ಒದಗಿದ ತೊಂದರೆ ಏನು?

(3) ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ?

(4) ಆನೆ ಇಲ್ಲದ್ದರಿಂದ ವೇಲಾಯುಧ ಎಲ್ಲಿ ಕೆಲಸಕ್ಕೆ ಸೇರಿದ?

(5) ಕೃಷ್ಣೇಗೌಡನ ಆನೆಯ ಹೆಸರೇನು?

XII. ಈ ಕೆಳಗಿನ ಛಂದಸ್ಸುಗಳಲ್ಲಿ ಒಂದರ ಲಕ್ಷಣಗಳನ್ನು ಬರೆಯಿರಿ. 1×5=5

(1) ವಾರ್ಧಕ ಷಟ್ಪದಿ.

(2) ಕಂದಪದ್ಯ.

(3) ಸಾಂಗತ್ಯ.

XIII. ಈ ಕೆಳಗಿನ ಪದ್ಯಗಳಲ್ಲಿ ಒಂದಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರು ಬರೆಯಿರಿ. 1×5=5

(1) ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ.

(2) ಎನ್ನವೊಲು ಪಾಂಡವರವೊಲು ಸಂ
ಪನ್ನ ದುಃಖಿಗಳಾರು ನವೆದರು
ಮುನ್ನಿನವರೊಳಗೆಂದು ದ್ರೌಪದಿ ಹಿರಿದು ಹಲುಬಿದಳು.

(3) ರ್ಪ ವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಳಿವಿನೆಗಂ.

XIV. ಈ ಕೆಳಗಿನ ಮೂರರಲ್ಲಿ ಒಂದರ ಅಲಂಕಾರವನ್ನು ಗುರ್ತಿಸಿ ಬರೆಯಿರಿ. 1×5=5

(1) ಮಂಥರೆ ಬಲೆಯೊಳಗೆ ಬಿದ್ದ ಹುಳುವಿನಂತೆ ವಿಲವಿಲನೆ ಒದ್ದಾಡಿದಳು.

(2) ಶಿರವೇ ಹೊನ್ನ ಕಲಶ.

(3) ಊರು ಉಪಕಾರವರಿಯದು; ಹೆಣ ಶೃಂಗಾರವರಿಯದು.

XV. (A) ಈ ಕೆಳಗಿನ ಪದಗಳಲ್ಲಿ ಐದಕ್ಕೆ ಅರ್ಥ ಬರೆಯಿರಿ. 5×1=5

(1) ಸಲಿಲ.
(2) ಪರಾಭವ.
(3) ನಂಜು.
(4) ವಲ್ಲಭ.
(5) ಬಗೆ.
(6) ನೆನೆ.
(7) ಕೃತಕ.
(8) ಖಿಲ.

(B) ಈ ಕೆಳಗಿನ ಪದಗಳಲ್ಲಿ ಆರಕ್ಕೆ ವಿರುದಾರ್ಥ ಬರೆಯಿರಿ. 6×1=6

(1) ಗಳಿಕೆ.
(2) ಶ್ರೇಷ್ಠ.
(3) ಶುದ್ಧ.
(4) ಸಮ.
(5) ಪಂಡಿತ.
(6) ಕೊಳ್ಳು.
(7) ಆದಿ.
(8) ಅಳಿವು.

(C) ಈ ಕೆಳಗಿನ ಎಲ್ಲಾ ಪದಗಳಿಗೆ ಒಂದೊಂದು ಸ್ವಂತ ವಾಕ್ಯರಚನೆ ಮಾಡಿ. 5×1=5

(1) ಪ್ರಯೋಗ.
(2) ಅಂತರಂಗ.
(3) ಆಕರ್ಷಣೆ.
(4) ಚರಣ.
(5) ಸೌಂದರ್ಯ.

XVI. (A) ಈ ಕೆಳಗಿನವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ. 2×2=4

(1) ಪ್ರಕೃತಿ ಭಾವ.
(2) ಅನುಕರಣಾವ್ಯಯಗಳು.
(3) ಜಶ್ತ್ವಸಂಧಿ.
(4) ಅರಿಸಮಾಸ.

(B) ಈ ಕೆಳಗಿನವುಗಳಲ್ಲಿ ಒಂದಕ್ಕೆ ಪ್ರಬಂಧ ಬರೆಯಿರಿ. 1×5=5

(1) ಆಚಾರವೇ ಸ್ವರ್ಗ, ಅನಾಚರವೇ ನರಕ.
(2) ವಾಯುಯಾನ.
(3) ಆಣೆಕಟ್ಟುಗಳ (ಡ್ಯಾಂ) ಮಹತ್ವ.